ಎಂ.ವಿ.ಸಿ ನಂಬರ್‌ಃ67/2025 ಪಿ ಡಬ್ಲ್ಯೂಃ 1

**ದಿಃ07.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಬಿ.ಕೆ.ಎಸ್. ವಕೀಲರಿಂದ ಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಪ್ರಥಮ ವರ್ತಮಾನ ವರದಿಯ ಯಥಾ ನಕಲು ನಿಪಿ.1
2. ದೂರಿನ ಯಥಾ ನಕಲು ನಿಪಿ.2
3. ಸ್ಥಳ ಪಂಚಾನಮೆಯ ಯಥಾ ನಕಲು ನಿಪಿ.3
4. ವಾಹನ ತಪಾಸನೆ ವರದಿಯ ಯಥಾ ನಕಲು ನಿಪಿ4
5. ಅಪಘಾತ ವಿವರದ ವರದಿ ಯಥಾ ನಕಲು ನಿಪಿ.5
6. ಗಾಯದ ಪ್ರಮಾಣ ಪತ್ರದ ಯಥಾ ನಕಲು ನಿಪಿ.6
7. ಅಂತಿಮ ದೋಷರೋಪಣಾ ಪತ್ರದ ಯಥಾ ನಕಲು ನಿಪಿ.7
8. ವಿಮಾ ಪಾಲಸಿಯ ಯಥಾ ನಕಲು ನಿಪಿ.8

9. ಮೂರು ಓ.ಪಿ.ಡಿ ಚೀಟಿಗಳು ನಿಪಿ.9 ರಿಂದ 11

10. ಮೂರು ಔಷಧಿ, ಬಿಲ್ಲುಗಳು ನಿಪಿ.12 ರಿಂದ 14

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.